ಫ್ಯಾಕ್ಸ್ : 080 – 2202 8041 ದೂರವಾಣಿ : 080 – 2202 8032

ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2014–15 ದಿನಾಂಕ: 1–10–2015

# KIND ATTENTION : MEDIA REPRESENTATIVES

THE CHANCELLOR OF FEDERAL REPUBLIC OF GERMANY MRS ANGELA MERKEL WILL BE ARRIVING FOR A TWO-DAY OFFICIAL STATE VISIT TO BENGALURU ON OCTOBER 5. THE PRIME MINISTER OF INDIA MR NARENDRA MODI WILL ALSO BE VISITING BANGALURU ON OCTOBER 6. BOTH THE LEADERS PARTICIPATE AND SHARE THE DAIS AT BOSCH FACTORY IN ADUGODI AND NASSCOM EVENT AT HOTEL LEELA PALACE.

ACCREDITED JOURNALISTS AND CAMERA PERSONS, REPRESENTING IMPORTANT PRINT AND ELECTRONIC MEDIA, MAY COLLECT SECURITY PASSES FROM THE OFFICE OF THE DEPUTY COMMISSIONER OF POLICE ( V V I P SECURITY ) ON SUBMISSION OF THEIR TWO PASSPORT SIZE PHOTOGRAPHS AND AN INVITE FROM THE ORGANIZERS, WHICH IS A MUST.

IN VIEW OF VISIT OF THE EXECUTIVE HEADS OF TWO NATIONS, SECURITY HAS BEEN GIVEN TOP PRIORITY AND MEDIA PERSONS WITHOUT ACCREDITATION CARDS WILL NOT BE ALLOWED TO THE VENUE OF THE EVENTS,

DIRECTOR,
DEPARTMENT OF INFORMATION AND PUBLIC RELATIONS
GOVERNMENT OF KARNATKA
BENGALURU - 560 001.

## ಪತ್ರಿಕಾ ಆಮಂತ್ರಣ

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ವಿವರ | ದಿನಾಂಕ / ಸಮಯ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|---|

| | | | |
|---|---|---|---|
| 1. | ಗಾಂಧೀ ಜಯಂತಿ ಪ್ರಯುಕ್ತ ಸದ್ಭಾವನಾ ಯಾತ್ರೆ:<br><br>ಉದ್ಘಾಟನೆ:<br><br>ಭರತ್‌ಲಾಲ್ ಮೀನಾ,<br>ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, | 2–10–2015<br>ಶುಕ್ರವಾರ<br>ಬೆಳಿಗ್ಗೆ<br>9–00 ಗಂಟೆಗೆ | ಬೆಂಗಳೂರು ಆನಂದರಾವ್ ವೃತ್ತದಿಂದ ಗಾಂಧೀ ಭವನದವರೆಗೆ |
| 2.<br><br><br><br><br><br>3. | ಗಾಂಧೀ ಜಯಂತಿ ಪ್ರಯುಕ್ತ ಮಹಾತ್ಮ ಗಾಂಧೀಜಿಯವರ ಪ್ರಿಯಗೀತೆಗಳ ಭಜನೆ ಕಾರ್ಯಕ್ರಮ.<br>ರಾಮಚಂದ್ರ ಹಡಪದ್ ಮತ್ತು ತಂಡದವರಿಂದ<br><br>"ಸ್ವಚ್ಛ ಬೆಂಗಳೂರು ಸ್ವಸ್ಥ ಬೆಂಗಳೂರು" ವಿಜಯವಾಣಿ ದಿನ ಪತ್ರಿಕೆ ವತಿಯಿಂದ:<br>ಉದ್ಘಾಟನೆ:<br>ಸಿದ್ದರಾಮಯ್ಯ,<br>ಮುಖ್ಯಮಂತ್ರಿಗಳು<br>ಕರ್ನಾಟಕ ಸರ್ಕಾರ. | 2–10–2015<br>ಶುಕ್ರವಾರ<br>ಬೆಳಿಗ್ಗೆ<br>9–00 ಗಂಟೆಗೆ<br><br>2–10–2015<br>ಶುಕ್ರವಾರ<br>ಮಧ್ಯಾಹ್ನ<br>09–30 ಗಂಟೆಗೆ | ನಂ. 17, ವಾರ್ತಾಸೌಧ,<br>ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು<br><br>ಪುರಭವನ,<br>ಜೆ.ಸಿ. ರಸ್ತೆ,<br>ಬೆಂಗಳೂರು |
| 4. | ರಾಜ್ಯ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯಲ್ಲಿ ನೂತನ ಮಹಾತ್ಮ ಗಾಂಧೀ ಪ್ರತಿಮೆ ಅನಾವರಣ.<br>ಅನಾವರಣ ಮಾಡುವವರು :<br>ಸಿದ್ದರಾಮಯ್ಯ,<br>ಮುಖ್ಯಮಂತ್ರಿಗಳು<br>ಕರ್ನಾಟಕ ಸರ್ಕಾರ.<br>ಅಧ್ಯಕ್ಷತೆ:<br>ಆರ್. ರೋಷನ್ ಬೇಗ್, | 2–10–2015<br>ಶುಕ್ರವಾರ<br>ಬೆಳಿಗ್ಗೆ<br>10–30 ಗಂಟೆಗೆ | ನಂ. 17, ವಾರ್ತಾಸೌಧ,<br>ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು |

| | | | |
|---|---|---|---|
| | ವಾರ್ತಾ, ಸಾರ್ವಜನಿಕ ಸಂಪರ್ಕ, ಮೂಲಸೌಕರ್ಯ ಅಭಿವೃದ್ಧಿ ಹಾಗೂ ಹಜ್ ಸಚಿವರು. | | |
| 5. | ಗಾಂಧೀ ಜಯಂತಿ ಪ್ರಯುಕ್ತ ಗಾಂಧೀ ಆಶ್ರಮ ಭಜನಾವಳಿ ಗಾಯನ:<br>ಶ್ರೀ ಜಯ್ ಷಾ, ಶ್ರೀಮದ್ ರಾಜಚಂದ್ರ ಮಿಷನ್, ಧರಮ್‌ಪುರ , ಗುಜರಾತ್ ಇವರಿಂದ. | 2–10–2015<br>ಶುಕ್ರವಾರ<br>ಬೆಳಿಗ್ಗೆ<br>10–00 ಗಂಟೆಗೆ | ಗಾಂಧೀ ಭವನ, ಕುಮಾರ ಪಾರ್ಕ್ ಪೂರ್ವ, ಬೆಂಗಳೂರು |
| 6. | ಮಾಜಿ ಪ್ರಧಾನ ಮಂತ್ರಿ ದಿವಂಗತ ಲಾಲ್ ಬಹದ್ದೂರ ಶಾಸ್ತ್ರಿರವರ 111ನೇ ಜನ್ಮ ದಿನದ ಅಂಗವಾಗಿ ಅವರ ಪ್ರತಿಮೆ ಬಳಿ ಅವರ ಭಾವಚಿತ್ರಕ್ಕೆ ಮಾರ್ಲಾಪಣೆ<br>ಹಾಗೂ<br>ಮಹಾತ್ಮ ಗಾಂಧೀಯವರ 146ನೇ ಜನ್ಮದಿನದ ಅಂಗವಾಗಿ ವಿಧಾನಸೌಧ ಮತ್ತು ವಿಕಾಸಸೌಧ ಕಟ್ಟಡದ ನಡುವೆ ಇರುವ ಅವರ ಪ್ರತಿಮೆ ಬಳಿ ಅವರ ಭಾವಚಿತ್ರಕ್ಕೆ ಮಾರ್ಲಾಪಣೆ<br><u>ಮಾರ್ಲಾಪಣೆ ಮಾಡುವವರು:</u><br>ಸಿದ್ದರಾಮಯ್ಯ,<br>ಮುಖ್ಯಮಂತ್ರಿಗಳು<br>ಕರ್ನಾಟಕ ಸರ್ಕಾರ. | 2–10–2015<br>ಶುಕ್ರವಾರ<br>ಬೆಳಿಗ್ಗೆ<br>10–00 ಗಂಟೆಗೆ | ವಿಧಾನಸೌಧದ ಪಶ್ಚಿಮ ದಿಕ್ಕಿನಲ್ಲಿರುವ ದಿ. ಲಾಲ್ ಬಹದ್ದೂರ ಶಾಸ್ತ್ರಿರವರ ಪ್ರತಿಮೆ ಬಳಿ<br>ವಿಧಾನಸೌಧ ಮತ್ತು ವಿಕಾಸಸೌಧ ಕಟ್ಟಡದ ನಡುವೆ ಇರುವ ಮಹಾತ್ಮ ಗಾಂಧೀಯವರ ಪ್ರತಿಮೆ ಬಳಿ |
| 7. | ಬಯೋಡೀಸಲ್ ಬಸ್ ಉದ್ಘಾಟನೆ:<br>ಶ್ರೀ ಸಿದ್ದರಾಮಯ್ಯ,<br>ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ | 2–10–2015<br>ಶುಕ್ರವಾರ<br>ಬೆಳಿಗ್ಗೆ<br>10–15 ಗಂಟೆಗೆ | ವಿಧಾನಸೌಧದ ಬಳಿ |
| 8. | ಮಹಾತ್ಮ ಗಾಂಧೀ ಜಯಂತಿ, ವಿಶ್ವ ಅಹಿಂಸಾ ದಿನಾಚರಣೆ ಗಾಂಧೀಜಿ ಮತ್ತು ಶ್ರೀಮದ್ ರಾಮಚಂದ್ರ ಭಾವಚಿತ್ರ | 2–10–2015<br>ಶುಕ್ರವಾರ | ಗಾಂಧೀ ಭವನ, ಕುಮಾರ ಪಾರ್ಕ್ ಪೂರ್ವ, ಬೆಂಗಳೂರು |

| | | | |
|---|---|---|---|
| | ಪ್ರದರ್ಶನ ಲೋಕಾರ್ಪಣೆ.<br><br>ಉದ್ಘಾಟನೆ:<br><br>ಸಿದ್ದರಾಮಯ್ಯ,<br>ಮುಖ್ಯಮಂತ್ರಿಗಳು<br>ಕರ್ನಾಟಕ ಸರ್ಕಾರ.<br>ಅಧ್ಯಕ್ಷತೆ:<br><br>ಆರ್. ರೋಷನ್ ಬೇಗ್,<br><br>ವಾರ್ತಾ, ಸಾರ್ವಜನಿಕ ಸಂಪರ್ಕ, ಮೂಲಸೌಕರ್ಯ ಅಭಿವೃದ್ಧಿ ಹಾಗೂ ಹಜ್ ಸಚಿವರು.<br><br><u>ಮುಖ್ಯ ಅತಿಥಿಗಳು:</u><br><br>ಹೆಚ್. ಕೆ. ಪಾಟೀಲ್,<br><br>ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು,.<br><br>ವಾರ್ತಾ ಸಾರ್ವಜನಿಕ ಸಂಪರ್ಕ ಇಲಾಖೆಯ ಗಾಂಧೀ ಕುರಿತ ವಿಶೇಷ ಪ್ರಕಟಣೆಗಳಾದ "ಜನಪದ' ಮತ್ತು 'ಮಾರ್ಚ್ ಆಫ್ ಕರ್ನಾಟಕ' ಮಾಸಿಕಗಳ ಲೋಕಾರ್ಪಣೆ:<br><br>ಶ್ರೀಮತಿ ಉಮಾಶ್ರೀ<br><br>ಕನ್ನಡ ಮತ್ತು ಸಂಸ್ಕೃತಿ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಖಾತೆ ಸಚಿವರು. | ಬೆಳಿಗ್ಗೆ<br><br>**11–00** ಗಂಟೆಗೆ | |
| **9.** | ಗಾಂಧಿ ಗ್ರಾಮ ಪುರಸ್ಕಾರ ವಿತರಣಾ ಸಮಾರಂಭ:<br><br><u>ಗಾಂಧೀ ಗ್ರಾಮ ಪುರಸ್ಕಾರ ವಿತರಣೆ:</u><br><br>ಸಿದ್ದರಾಮಯ್ಯ, | ಶುಕ್ರವಾರ<br><br>ಮಧ್ಯಾಹ್ನ<br><br>**12–15** ಗಂಟೆಗೆ | ಬ್ಯಾಂಕ್ವೆಟ್ ಹಾಲ್,<br>ವಿಧಾನಸೌಧ, ಬೆಂಗಳೂರು |

| | | | |
|---|---|---|---|
| | ಮುಖ್ಯಮಂತ್ರಿಗಳು,<br>ಕರ್ನಾಟಕ ಸರ್ಕಾರ<br><br>ಎಚ್.ಕೆ. ಪಾಟೀಲ<br>ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು.<br>ಅಧ್ಯಕ್ಷತೆ:<br>ಆರ್. ರೋಷನ್ ಬೇಗ್,<br>ವಾರ್ತಾ, ಸಾರ್ವಜನಿಕ ಸಂಪರ್ಕ, ಮೂಲಸೌಕರ್ಯ ಅಭಿವೃದ್ಧಿ ಹಾಗೂ ಹಜ್ ಸಚಿವರು. | | |
| 10. | ಗಾಂಧೀ ಜಯಂತಿ ಪ್ರಯುಕ್ತ ಮಹಾತ್ಮ ಗಾಂಧೀಜಿಯವರ ಪ್ರಿಯಗೀತೆಗಳ ಭಜನೆ ಕಾರ್ಯಕ್ರಮ.<br>ರಾಮಚಂದ್ರ ಹಡಪದ್ ಮತ್ತು ತಂಡದವರಿಂದ | **2–10–2015**<br>ಶುಕ್ರವಾರ<br>ಸಂಜೆ<br>**4–00** ಗಂಟೆಗೆ | ರವೀಂದ್ರ ಕಲಾಕ್ಷೇತ್ರ,<br>ಬೆಂಗಳೂರು |
| 11. | ಗಾಂಧೀ ಸೇವಾ ಪ್ರಶಸ್ತಿ – ಕರ್ನಾಟಕ –2015 ಪ್ರದಾನ ಸಮಾರಂಭ ಹಾಗೂ ಗಾಂಧೀಜಿ ಕನಸು – ಕರ್ನಾಟಕದಲ್ಲಿ ನನಸು ಪ್ರಚಾರಾಂದೋಲನಕ್ಕೆ ಚಾಲನೆ:<br><br>ಸಿದ್ದರಾಮಯ್ಯ,<br>ಮುಖ್ಯಮಂತ್ರಿಗಳು<br>ಕರ್ನಾಟಕ ಸರ್ಕಾರ.<br><br>ಪ್ರಾಸ್ತಾವಿಕ ನುಡಿ<br>ಶ್ರೀ ಆರ್. ರೋಷನ್ ಬೇಗ್,<br>ವಾರ್ತಾ, ಸಾರ್ವಜನಿಕ ಸಂಪರ್ಕ, ಮೂಲಸೌಕರ್ಯ ಅಭಿವೃದ್ಧಿ ಹಾಗೂ | **2–10–2015**<br>ಶುಕ್ರವಾರ<br>ಸಂಜೆ<br>**5–00** ಗಂಟೆಗೆ | ರವೀಂದ್ರ ಕಲಾಕ್ಷೇತ್ರ,<br>ಬೆಂಗಳೂರು |

| | | | |
|---|---|---|---|
| | ಹಜ್ ಸಚಿವರು.<br><br>ಅಧ್ಯಕ್ಷತೆ:<br><br>ಶ್ರೀ ಆರ್. ವಿ. ದೇವರಾಜ್,<br>ಶಾಸಕರು, ಚಿಕ್ಕಪೇಟೆ ಕ್ಷೇತ್ರ<br><br><u>ಮುಖ್ಯ ಅತಿಥಿಗಳು:</u><br><br>ಅನಂತಕುಮಾರ್,<br>ಕೇಂದ್ರದ ರಸೊಬ್ಬರ ಖಾತೆ ಸಚಿವರು,<br><br>ಹೆಚ್. ಕೆ. ಪಾಟೀಲ್,<br>ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯರ್ ರಾಜ್ ಖಾತೆ ಸಚಿವರು.<br><br>ರಾಮಲಿಂಗಾರೆಡ್ಡಿ,<br>ಸಾರಿಗೆ ಸಚಿವರು.<br><br>ಡಾ. ಚಂದ್ರಶೇಖರ ಕಂಬಾರ,<br><br>ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರು ಹಾಗೂ ಗಾಂಧೀ ಸೇವಾ ಪ್ರಶಸ್ತಿ – ಕರ್ನಾಟಕ – 2015 ಆಯ್ಕೆ ಸಮಿತಿ ಅಧ್ಯಕ್ಷರು.<br><br><u>ಗಾಂಧೀ ಸೇವಾ ಪ್ರಶಸ್ತಿ – ಕರ್ನಾಟಕ –2015 ಪ್ರಶಸ್ತಿ ಸ್ವೀಕಾರ:</u><br><br>ಡಾ. ಹೊ. ಶ್ರೀನಿವಾಸಯ್ಯ,<br><br>ಅಧ್ಯಕ್ಷರು ಹಾಗೂ ಹಿರಿಯ ಗಾಂಧೀವಾದಿಗಳು,<br>ಕರ್ನಾಟಕ ಗಾಂಧೀ ಸ್ಮಾರಕ ನಿಧಿ,<br>ಬೆಂಗಳೂರು. | | |

| | | | |
|---|---|---|---|
| 12. | ಮಹಾತ್ಮ ಗಾಂಧೀ ಜಯಂತಿ ಹಾಗೂ ಅಂತಾರಾಷ್ಟ್ರೀಯ ಅಹಿಂಸಾ ದಿನಾಚರಣೆಯ ಪ್ರಯುಕ್ತ ನೃತ್ಯ ಹಾಗೂ ಗೀತನಮನ:<br><br>ಉದ್ಘಾಟನೆ:<br><br>ಶ್ರೀ ವಜುಭಾಯಿ ವಾಲಾ,<br>ಮಾನ್ಯ ರಾಜ್ಯಪಾಲರು,<br>ಕರ್ನಾಟಕ ಸರ್ಕಾರ.<br><br>ಅತಿಥಿಗಳು:<br><br>ಡಿ.ಎಚ್. ಶಂಕರಮೂರ್ತಿ,<br>ಸಭಾಪತಿಗಳು,<br>ಕರ್ನಾಟಕ ವಿಧಾನ ಪರಿಷತ್ತು | **2–10–2015**<br>ಶುಕ್ರವಾರ<br>ಸಂಜೆ<br>**6–00** ಗಂಟೆಗೆ | ಗಾಜಿನ ಮನೆ,<br>ರಾಜಭವನ, ಬೆಂಗಳೂರು |
| 13. | ಬೆಳ್ಳಿ ಸಿನಿಮಾ – ಬೆಳ್ಳಿ ಮಾತು:<br><br>ಬೆಳ್ಳಿ ಸಿನಿಮಾ : "ಅಗಸಿ ಪಾರ್ಲರ್"<br><br>ಬೆಳ್ಳಿಮಾತು: ಮಹಾಂತೇಶ್ ರಾಮದುರ್ಗ, 'ಅಗಸಿ ಪಾರ್ಲರ್' ಚಿತ್ರದ ನಿರ್ದೇಶಕರು<br><br>ಅಧ್ಯಕ್ಷತೆ:<br><br>ಎಸ್.ವಿ. ರಾಜೇಂದ್ರಸಿಂಗ್ ಬಾಬು<br>ಅಧ್ಯಕ್ಷರು, ಕರ್ನಾಟಕ ಚಲನಚಿತ್ರ ಅಕಾಡೆಮಿ<br><br>ಅತಿಥಿಗಳು:<br><br>ಆರ್. ಶ್ರೀಧರ್,<br>ಅಧ್ಯಕ್ಷರು,<br>ಪ್ರೆಸ್ ಕ್ಲಬ್ ಆಫ್ ಬೆಂಗಳೂರು. | **3–10–2015**<br>ಶನಿವಾರ<br>ಸಂಜೆ<br>**4–00** | ಚಾಮುಂಡೇಶ್ವರಿ ಸ್ಟುಡಿಯೋ,<br>ಮಿಲ್ಲರ್ಸ್ ರಸ್ತೆ. ಬೆಂಗಳೂರು. |

| | | | |
|---|---|---|---|
| | ಪ್ರಕಾಶ್ ಬೆಳವಾಡಿ,<br>ಖ್ಯಾತ ರಂಗಕರ್ಮಿ ಮತ್ತು ಚಲನಚಿತ್ರ ನಟರು.<br><br>ಕೆ. ಶಿವಮೂರ್ತಿ,<br>ಚಲನಚಿತ್ರ ನಿರ್ಮಾಪಕರು. | | |

ನಿರ್ದೇಶಕರ ಪರವಾಗಿ

# ವಾರ್ತಾಸೌಧದಲ್ಲಿ
# ಮಹಾತ್ಮಗಾಂಧೀ ಪ್ರತಿಮೆ ಅನಾವರಣ

ಬೆಂಗಳೂರು, ಅಕ್ಟೋಬರ್ 1 (ಕರ್ನಾಟಕ ವಾರ್ತೆ)

ರಾಜ್ಯ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯು ಬೆಂಗಳೂರಿನ ಭಗವಾನ್ ಮಹಾವೀರ್ ರಸ್ತೆಯಲ್ಲಿರುವ ವಾರ್ತಾಸೌಧದಲ್ಲಿ ನೂತನವಾಗಿ ಪ್ರತಿಷ್ಠಾಪಿಸುತ್ತಿರುವ ಮಹಾತ್ಮ ಗಾಂಧೀ ಪ್ರತಿಮೆಯನ್ನು ರಾಜ್ಯದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅಕ್ಟೋಬರ್ 2 ರಂದು ಬೆಳಿಗ್ಗೆ 10–00 ಗಂಟೆಗೆ ಅನಾವರಣ ಮಾಡುವರು. ರಾಜ್ಯ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ, ಮೂಲಸೌಕರ್ಯ ಅಭಿವೃದ್ಧಿ ಹಾಗೂ ಹಜ್ ಖಾತೆ ಸಚಿವ ಆರ್. ರೋಷನ್ ಬೇಗ್ ಅವರು ಅಧ್ಯಕ್ಷತೆ ವಹಿಸುವರು.

ಅಂದು ಬೆಳಿಗ್ಗೆ 9–00 ಗಂಟೆಯಿಂದ ವಾರ್ತಾಸೌಧದಲ್ಲಿ ರಾಮಚಂದ್ರ ಹಡಪದ್ ಮತ್ತು ತಂಡದವರಿಂದ ಗಾಂಧೀ ಪ್ರಿಯ ಭಜನೆ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.

ಅಲ್ಲದೆ, ಕನ್ನಡ ಮತ್ತು ಸಂಸ್ಕೃತಿ ಹಾಗೂ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ಶ್ರೀಮತಿ ಉಮಾಶ್ರೀ ಅವರು ಅಕ್ಟೋಬರ್ 2 ರಂದು ಬೆಳಿಗ್ಗೆ 11–00 ಗಂಟೆಗೆ ನಗರದ ಗಾಂಧೀ ಭವನದಲ್ಲಿ ರಾಜ್ಯ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಪ್ರಕಟಣೆಗಳಾದ 'ಜನಪದ' ಹಾಗೂ 'ಮಾರ್ಚ್ ಆಫ್ ಕರ್ನಾಟಕ' ಮಹಾತ್ಮಗಾಂಧಿ ಕುರಿತ ವಿಶೇಷ ಸಂಚಿಕೆಗಳನ್ನು ಲೋಕಾರ್ಪಣೆ ಮಾಡುವರು.

ಹೆಚ್‌ಬಿಡಿ:ಬಾಬು:ಜಿಪಿಆರ್

# ಮನೆಯ ಹಿರಿಯರನ್ನು ತಮ್ಮ ಸ್ವಾರ್ಥಕ್ಕಾಗಿ ವೃದ್ಧಾಶ್ರಮಕ್ಕೆ ದೂಡುವುದು ಮಹಾ ಪಾಪದ ಕೆಲಸ- ಸಚಿವ ರಾಮಲಿಂಗಾರೆಡ್ಡಿ

ಬೆಂಗಳೂರು, ಅಕ್ಟೋಬರ್ 1 (ಕರ್ನಾಟಕ ವಾರ್ತೆ)

ಸಮಾಜದಲ್ಲಿ ಕಿರಿಯರು ಮುಂದೊಂದು ದಿನ ತಮಗೂ ತಮ್ಮ ಪೋಷಕರಂತೆ ವೃದ್ಧಾಪ್ಯದೊಂದಿಗೆ ತಮ್ಮ ಮಕ್ಕಳ ಮೇಲೆ ಅವಲಂಬಿತರಾಗುವ ಪರಿಸ್ಥಿತಿ ಒದಗಿ ಬರಬಹುದು ಎಂಬ ಸತ್ಯಾಂಶವನ್ನು ಮನದಟ್ಟು ಮಾಡಿಕೊಂಡು ತಮ್ಮ ಹಿರಿಯರ ಪಾಲನೆ ಪೋಷಣೆ ಮಾಡಬೇಕು. ತಮ್ಮ ಸ್ವಾರ್ಥಕ್ಕಾಗಿ ಪೋಷಕರನ್ನು ಹೊರೆಯೆಂದು ಕಂಡು ವೃದ್ಧಾಶ್ರಮಗಳಿಗೆ ದೂಡುವುದು ಮಹಾ ಪಾಪದ ಕೆಲಸ ಎಂದು ಸಾರಿಗೆ ಸಚಿವರೂ ಹಾಗೂ ಬೆಂಗಳೂರು ನಗರ ಜಿಲ್ಲಾ ಉಸ್ತುವಾರಿ ಸಚಿವರಾದ ರಾಮಲಿಂಗಾರೆಡ್ಡಿ ಅವರು ಅಭಿಪ್ರಾಯಪಟ್ಟರು.

ಇಂದು ನಗರದ ರವೀಂದ್ರ ಕಲಾಕ್ಷೇತ್ರದಲ್ಲಿ ಆಯೋಜಿಸಲಾಗಿದ್ದ ವಿಶ್ವ ಹಿರಿಯ ನಾಗರಿಕರ ದಿನಾಚರಣೆಯನ್ನು ಉದ್ಘಾಟಿಸಿ ಮಾತನಾಡಿದ ಅವರು ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯು ವಿವಿಧ ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಹಿರಿಯರಿಗೆ ಜೀವಮಾನದ ಸಾಧನೆ ಪ್ರಶಸ್ತಿಗಳನ್ನು ಹಾಗೂ ಕ್ರೀಡೆ ಹಾಗೂ ಸಾಂಸ್ಕೃತಿಕ ಸ್ಪರ್ಧಾ ವಿಜೇತರಿಗೆ ಬಹುಮಾನ ವಿತರಣೆ ಮಾಡುತ್ತಿರುವುದು ಶ್ಲಾಘನೀಯ ಸಂಗತಿ ಎಂದರು. ಇಳಿವಯಸ್ಸಿನಲ್ಲಿಯೂ ಯುವಕರಂತೆ ಹುಮ್ಮಸ್ಸು ಬೀರುವ ಈ ಹಿರಿಯರಿಗೆ ಸನ್ಮಾನ ಮಾಡಿ ಪ್ರೋತ್ಸಾಹ ನೀಡುವುದು ಸರ್ಕಾರದ ಕರ್ತವ್ಯವಾಗಿದೆ ಎಂದರು.

ವಿವಿಧ ಕ್ಷೇತ್ರಗಳಲ್ಲಿ ಜೀವಮಾನದ ಸಾಧನೆಗಾಗಿ ಒಟ್ಟು ಏಳು ಹಿರಿಯ ನಾಗರಿಕರಿಗೆ ಪ್ರಶಸ್ತಿಯನ್ನು ವಿತರಿಸಿದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವೆ ಉಮಾಶ್ರೀ ಅವರು ಈಗಲೂ ಮಕ್ಕಳಲ್ಲಿರುವಂತೆ ಉತ್ಸಾಹ ಮರೆಯುತ್ತಿರುವ ಹಿರಿಯರನ್ನು ಶ್ಲಾಘಿಸಿ ನಮಿಸಿದರು. ಇದೇ ಸಂದರ್ಭದಲ್ಲಿ ಮಾತನಾಡಿದ ಅವರು ಹಿಂದಿನ ಎರಡೂ ವರ್ಷಗಳಿಂದ ಸರ್ಕಾರವು ಹಿರಿಯ ನಾಗರಿಕರ ಕಲ್ಯಾಣಕ್ಕಾಗಿ ಅತಿ ಹೆಚ್ಚಿನ ಸಂಖ್ಯೆಯ ಕಾರ್ಯಕ್ರಮಗಳನ್ನು ನಡೆಸಿದೆ ಎಂದರು. ರಾಜ್ಯದಲ್ಲಿ ಒಟ್ಟು 7.00 ಲಕ್ಷ ಜನರು ವೃದ್ಧಾಪ್ಯ ವೇತನ ಪಡೆಯುತ್ತಿದ್ದು, ಜಿಲ್ಲಾವಾರು ವೃದ್ಧಾಶ್ರಮಗಳ ನಿರ್ಮಾಣಕ್ಕಾಗಿ ಸರ್ಕಾರವು ನೀಡುವ ಅನುದಾನವನ್ನು ರೂ. 8.00 ಲಕ್ಷಗಳಿಗೆ ಏರಿಸಲಾಗಿದೆ ಎಂದು ತಿಳಿಸಿದರು. ಈ ಹಿಂದೆ ಜೀವಮಾನದ ಸಾಧನೆಗಾಗಿ ನೀಡುತ್ತಿದ್ದ ಪ್ರಶಸ್ತಿ ಮೊತ್ತವು ಕೇವಲ 10,000/- ರೂ.ಗಳಾಗಿದ್ದು ಈ ಸಾಲಿನಿಂದ ಅದನ್ನು 1.00 ಲಕ್ಷ ರೂ.ಗಳಿಗೆ ಹೆಚ್ಚಿಸಲಾಗಿದೆ ಅಲ್ಲದೆ ಪ್ರಸ್ತುತ ರಾಜ್ಯಮಟ್ಟದ ಹಿರಿಯ ನಾಗರಿಕರ ಕ್ರೀಡೆ ಹಾಗೂ ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ನೀಡಲಾಗುತ್ತಿರುವ ಬಹುಮಾನದ ಮೊತ್ತವನ್ನು ಬರುವ ವರ್ಷದಿಂದ ಹೆಚ್ಚಿಸಲಾಗುವುದು ಎಂದರು. ಪ್ರಥಮ ಬಹುಮಾನದ ಮೊತ್ತವನ್ನು ರೂ. 3,000 ದಿಂದ 15,000 ಕ್ಕೆ, ಎರಡನೇ ಬಹುಮಾನ 2,000 ರೂ.ಗಳಿಂದ 10,000/- ಗಳಿಗೆ, ಮೂರನೇ ಬಹುಮಾನ 1,000 ರೂ.ಗಳಿಂದ 5,000 ಕ್ಕೆ ಹೆಚ್ಚಿಸಲಾಗುವುದು ಎಂದು ಸಚಿವರು ತಿಳಿಸಿದರು.

ಹಿರಿಯ ನಾಗರಿಕರ ಆರೋಗ್ಯ ಹಾಗೂ ರಕ್ಷಣೆಗಾಗಿ 2007 ರಲ್ಲಿ ರಾಜ್ಯ ಸರ್ಕಾರವು ಕಾಯ್ದೆಯೊಂದನ್ನು ರೂಪಿಸಿದ್ದು ನಿರ್ಲಕ್ಷ ಮಾಡುವವರಿಗೆ ಕಾಯ್ದೆಯಡಿ ಶಿಕ್ಷೆ ಶತಸಿದ್ಧ ಎಂದು ಸಚಿವರು ಎಚ್ಚರಿಸಿದರು.

ಇದೇ ಸಂದರ್ಭದಲ್ಲಿ ಹಿರಿಯ ನಾಗರಿಕರ ಸಹಾಯವಾಣಿಯ ಯಶಸ್ವಿ ಸ್ಪಂದನಗಳ ಸಂಗ್ರಹ ಹಾಗೂ ಅವರ ಸಮಸ್ಯೆಗಳ ಕುರಿತ ಪುಸ್ತಿಕೆಯನ್ನು ಸಚಿವರು ಬಿಡುಗಡೆಗೊಳಿಸಿದರು. ಕಾರ್ಯಕ್ರಮದಲ್ಲಿ ಪಾಲಕರ ಪೋಷಣೆ, ಸಂರಕ್ಷಣೆ ಹಾಗೂ ಹಿರಿಯ ನಾಗರಿಕರ ರಕ್ಷಣಾ ಕಾಯ್ದೆ 2007 ರ ಕುರಿತು ಕಿರುಚಿತ್ರ ಪ್ರದರ್ಶನಕ್ಕೆ ಸಚಿವ ರಾಮಲಿಂಗಾರೆಡ್ಡಿ ಅವರು ಚಾಲನೆ ನೀಡಿದರು.

ಸಮಾರಂಭದಲ್ಲಿ ಕಲಾ ಕ್ಷೇತ್ರದಲ್ಲಿ ಸಾಧನೆಗೈದ ದಾವಣಗೆರೆ ಜಿಲ್ಲೆಯ ಹೆಚ್. ಷಡಾಕ್ಷರಪ್ಪ, ಸಮಾಜ ಸೇವೆಗಾಗಿ ಬಾಗಲಕೋಟೆ ಜಿಲ್ಲೆಯ, ಗುರಮ್ಮ ಹಂಪಯ್ಯ ಸಂಕೀನ ಮಠ, ಶಿಕ್ಷಣ ಕ್ಷೇತ್ರದ ಸೇವೆಗಾಗಿ ಉತ್ತರ ಕನ್ನಡ ಜಿಲ್ಲೆಯ ಅಮೀರ ಹುಸೇನ ದೊಡ್ಡಮನಿ, ಕ್ರೀಡಾಕ್ಷೇತ್ರದಲ್ಲಿ ಸಾಧನೆಗೈದ ಬೆಂಗಳೂರಿನ ಎಸ್. ಸರೋಜ, ಸಾಹಿತ್ಯ ಕ್ಷೇತ್ರದಲ್ಲಿ ಸಾಧನೆಗೈದ ಮೈಸೂರಿನ ಡಾ: ಹೆಚ್.ಜೆ. ಲಕ್ಕಪ್ಪಗೌಡ, ಕಾನೂನು ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದ ಬೆಂಗಳೂರಿನ ಶಿವಕುಮಾರ್, ಹಿರಿಯ ನಾಗರಿಕರಿಗಾಗಿ ದುಡಿಯುತ್ತಿರುವ ಬಳ್ಳಾರಿ ಜಿಲ್ಲೆಯ ಅನ್ನವರ್ಜುಲ ಸುಬ್ರಮಣ್ಯಂ ಮೆಮೊರಿಯಲ್ ಟ್ರಸ್ಟ್ ಸಂಸ್ಥೆಗೆ ಜೀವಮಾನದ ಸಾಧನೆ ಪ್ರಶಸ್ತಿಯನ್ನು ಸಚಿವೆ ಉಮಾಶ್ರೀ ಅವರು ವಿತರಿಸಿದರು. ಸಮಾರಂಭದಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಮಿತಿಯ ಅಧ್ಯಕ್ಷರಾದ ಹಾಗೂ ಶಾಸಕರಾದ ಮಾಲೀಕಯ್ಯ ವೆಂಕಯ್ಯ ಗುತ್ತೇದಾರ, ವಿಧಾನ ಪರಿಷತ್ ಸದಸ್ಯ ಟಿ.ಎ. ಶರವಣ, ಇಲಾಖೆಯ ಸರ್ಕಾರದ ಪ್ರಧಾನ ಕಾರ್ಯದರ್ಶಿ ಡಾ: ರಜನೀಶ್ ಗೋಯಲ್, ಇಲಾಖೆ ನಿರ್ದೇಶಕ ಗೋವಿಂದರಾಜು ಸೇರಿದಂತೆ ಇತರೆ ಗಣ್ಯರು ಹಾಗೂ ಹಿರಿಯ ಅಧಿಕಾರಿಗಳು ಪಾಲ್ಗೊಂಡಿದ್ದರು.

ಪಲ್ಲವಿ/ಕೆಎಂ

## ಈ ವಾರದ ಬೆಳ್ಳಿಸಿನಿಮಾ–ಬೆಳ್ಳಿಮಾತು:
## "ಅಗಸಿ ಪಾರ್ಲರ್" ಚಲನಚಿತ್ರ ಪ್ರದರ್ಶನ, ಸಂವಾದ

ಬೆಂಗಳೂರು, ಅಕ್ಟೋಬರ್ 1 (ಕರ್ನಾಟಕ ವಾರ್ತೆ)

ಕರ್ನಾಟಕ ಚಲನಚಿತ್ರ ಅಕಾಡೆಮಿಯು ಪ್ರತಿ ಶನಿವಾರ ನಡೆಸುವ ಬೆಳ್ಳಿಸಿನಿಮಾ–ಬೆಳ್ಳಿಮಾತು ಕಾರ್ಯಕ್ರಮದಡಿ ಅಕ್ಟೋಬರ್ 3 ರ ಶನಿವಾರದಂದು ಬೆಳ್ಳಿ ಸಿನಿಮಾ "ಅಗಸಿ ಪಾರ್ಲರ್ " ಚಲನಚಿತ್ರ ಪ್ರದರ್ಶನವನ್ನು ಏರ್ಪಡಿಸಲಾಗಿದೆ. ಈ ಚಿತ್ರದ ನಿರ್ದೇಶಕ ಮಹಾಂತೇಶ್ ರಾಮದುರ್ಗ ಅವರಿಂದ ಬೆಳ್ಳಿಮಾತು ಸಂವಾದ ಕಾರ್ಯಕ್ರಮ ನಡೆಯಲಿದೆ ಎಂದು ಅಕಾಡೆಮಿಯ ರಿಜಿಸ್ಟ್ರಾರ್ ಹೆಚ್. ಬಿ. ದಿನೇಶ್ ಅವರು ತಿಳಿಸಿದ್ದಾರೆ.

ಬೆಂಗಳೂರು ಮಿಲ್ಲರ್ಸ್ ರಸ್ತೆಯ ಚಾಮುಂಡೇಶ್ವರಿ ಸ್ಟುಡಿಯೋದಲ್ಲಿ ಅಕ್ಟೋಬರ್ 3 ರಂದು ಸಂಜೆ 4–00 ಗಂಟೆಗೆ ನಡೆಯುವ ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕರ್ನಾಟಕ ಚಲನಚಿತ್ರ ಅಕಾಡೆಮಿಯ ಅಧ್ಯಕ್ಷ ಎಸ್. ವಿ. ರಾಜೇಂದ್ರ ಸಿಂಗ್ ಬಾಬು ಅವರು ವಹಿಸುವರು. ಅತಿಥಿಗಳಾಗಿ ಚಲನಚಿತ್ರ ನಟರಾದ ಕೆ. ಎಸ್. ಶ್ರೀಧರ್, ಖ್ಯಾತ ರಂಗಕರ್ಮಿ ಮತ್ತು ಚಲನಚಿತ್ರ ನಟ ಪ್ರಕಾಶ್

ಬೆಳವಾಡಿ ಹಾಗೂ ಚಲನಚಿತ್ರ ನಿರ್ಮಾಪಕ ಕೆ. ಶಿವಮೂರ್ತಿ ಪಾಲ್ಗೊಳ್ಳುವರು ಎಂದು ಹೆಚ್. ಬಿ. ದಿನೇಶ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹೆಚ್‌ಬಿಡಿ:ಬಾಬು:ಜಿಪಿಆರ್.

## ಸಚಿವ ಸಂಪುಟ ಸಭೆ

ಬೆಂಗಳೂರು, ಅಕ್ಟೋಬರ್ 1 (ಕರ್ನಾಟಕ ವಾರ್ತೆ)

ರಾಜ್ಯ ಸಚಿವ ಸಂಪುಟದ ಸಭೆಯು ಅಕ್ಟೋಬರ್ 7 ರಂದು ಬೆಳಿಗ್ಗೆ 11–00 ಗಂಟೆಗೆ ವಿಧಾನಸೌಧ ಮೂರನೇ ಮಹಡಿಯಲ್ಲಿರುವ ಸಚಿವ ಸಂಪುಟ ಸಭಾಮಂದಿರದಲ್ಲಿ ನಡೆಯಲಿದೆ.

ಪಲ್ಲವಿ:ಬಾಬು:ಜಿಪಿಆರ್.

## ಸಮವರ್ತಿತ ಪ್ರಭಾರ ಹುದ್ದೆಗೆ ನೇಮಕ

ಬೆಂಗಳೂರು, ಅಕ್ಟೋಬರ್ 1 (ಕರ್ನಾಟಕ ವಾರ್ತೆ)

ಪಶುಸಂಗೋಪನೆ ಮತ್ತು ಮೀನುಗಾರಿಕಾ ಇಲಾಖೆಯ ಕಾರ್ಯದರ್ಶಿ ಡಾ. ಎನ್. ಎಸ್. ಚನ್ನಪ್ಪಗೌಡ ಅವರನ್ನು ವಯೋನಿವೃತ್ತಿ ಹೊಂದುತ್ತಿರುವ ಕನ್ನಡ ಸಂಸ್ಕೃತಿ ಮತ್ತು ವಾರ್ತಾ ಇಲಾಖೆಯ ಕಾರ್ಯದರ್ಶಿ ಬಿ. ಜಿ. ನಂದಕುಮಾರ್ ಅವರಿಂದ ತೆರವಾಗುವ ಹುದ್ದೆಗೆ ಸಮವರ್ತಿತ ಪ್ರಭಾರದಲ್ಲಿ ನೇಮಿಸಿ ಸರ್ಕಾರ ಆದೇಶ ಹೊರಡಿಸಿದೆ.

ಪಲ್ಲವಿ:ಬಾಬು:ಜಿಪಿಆರ್.

## PRIME MINISTER NARENDRA MODI AND GERMAN CHANCELLOR ANGELA MERKEL TO JOINTLY PARTICIPATE IN PROGRAMMES IN CITY ON OCTOBER 6

**BENGALURU, OCTOBER 1 (Karnataka Information):**

**The Prime Minister of India Mr Narendra Modi and the Chancellor of the Federal Republic of Germany**

**Mrs Angela Merkel will be participating jointly in two programmes in the city on October 6.**

**According to the tour itinerary released here on Thursday, both the leaders will be visiting the Bosch Factory at Adugodi. They also attend and share the dais at the NASSCOM event at Hotel Leela Palace.**

**The German Chancellor will be arriving in the city a day earlier, on October 5, to the event and leave for Germany on October 6 afternoon. Where as the Prime Minister will arrive on October 6 and leave for New Delhi, the same day.**

************

**DPM**

# 176 ಗ್ರಾಮಪಂಚಾಯಿತಿಗಳಿಗೆ ಗಾಂಧಿಗ್ರಾಮ ಪುರಸ್ಕಾರ

**ಬೆಂಗಳೂರು, ಅಕ್ಟೋಬರ್ 1 (ಕರ್ನಾಟಕ ವಾರ್ತೆ)**

ರಾಜ್ಯದ ಗ್ರಾಮಪಂಚಾಯಿತಿಗಳ ಕಾರ್ಯನಿರ್ವಹಣೆಯನ್ನು ಪ್ರೋತ್ಸಾಹಿಸಲು ನೀಡುವ ಗಾಂಧಿಗ್ರಾಮ ಪುರಸ್ಕಾರ ವಿತರಣಾ ಸಮಾರಂಭವು ಶುಕ್ರವಾರ ಅಕ್ಟೋಬರ್02, 2015 ರಂದು ನಡೆಯಲಿದೆ.

ಮುಖ್ಯಮಂತ್ರಿಗಳಾದ ಶ್ರೀ ಸಿದ್ಧರಾಮಯ್ಯ ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯ ಸಚಿವರಾದ ಶ್ರೀ ಎಚ್.ಕೆ.ಪಾಟೀಲ ರವರು ಪ್ರಶಸ್ತಿ ವಿತರಣೆ ಮಾಡಲಿದ್ದಾರೆ. ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಸಚಿವರಾದ ಶ್ರೀ ಆರ್. ರೋಷನ್ ಬೇಗ್ ರವರು ಅಧ್ಯಕ್ಷತೆ ವಹಿಸಲಿದ್ದಾರೆ. ಅಂದು ಮಧ್ಯಾಹ್ನ 12.15ಕ್ಕೆ ವಿಧಾನಸೌಧದ ಬ್ಯಾಂಕ್ವೇಟ್ ಹಾಲ್‌ನಲ್ಲಿ ಈ ಸಮಾರಂಭ ನಡೆಯಲಿದೆ.

ಉತ್ತಮ ಆಡಳಿತ ಮತ್ತು ಆರ್ಥಿಕ ಕಾರ್ಯಸಾಧನೆ ಮಾಡಿರುವ 176 ಗ್ರಾಮಪಂಚಾಯಿತಿಗಳನ್ನು ಆಯ್ಕೆ ಮಾಡಲಾಗಿದ್ದು, ಈ ಗ್ರಾಮಪಂಚಾಯಿತಿಗಳಿಗೆ ಗಾಂಧಿಗ್ರಾಮ ಪುರಸ್ಕಾರ ಪ್ರೋತ್ಸಾಹ ಅನುದಾನವಾಗಿ ತಲಾ 5 ಲಕ್ಷ ರೂಪಾಯಿಗಳನ್ನು ನೀಡಲಾಗುತ್ತಿದೆ ಎಂದು ಪಂಚಾಯತ್‌ರಾಜ್‌ನ ಪ್ರದಾನ ಕಾಯದರ್ಶಿಗಳಾದ ಡಾ. ಎನ್. ನಾಗಾಂಬಿಕದೇವಿ ರವರು ತಿಳಿಸಿದ್ದಾರೆ.

## ಪ್ರಶಸ್ತಿಗೆ ಆಯ್ಕೆಯಾದ 176 ಗ್ರಾಮಪಂಚಾಯಿತಿಗಳ ವಿವರ

**ಬಾಗಲಕೋಟೆ ಜಿಲ್ಲೆಯಲ್ಲಿ** ನಾಗರಾಳ ಎಸ್‌ಪಿ (ಬಾದಾಮಿ), ಶಿರೂರ (ಬಾಗಲಕೋಟೆ), ಯಡಹಳ್ಳಿ (ಬೀಳಗಿ), ಬಿಂಜವಾಡಗಿ (ಹುನಗುಂದ), ನಾವಲಗಿ (ಜಮಖಂಡಿ), ಮಂಟೂರ (ಮುಧೋಳ) ಗ್ರಾಮ ಪಂಚಾಯತಿಗಳು ಆಯ್ಕೆಯಾಗಿರುತ್ತವೆ.

**ಬೆಂಗಳೂರು (ನಗರ) ಜಿಲ್ಲೆಯಲ್ಲಿ** ಬ್ಯಾಗಡದೇನಹಳ್ಳಿ (ಆನೇಕಲ್), ಕಿತ್ತನಹಳ್ಳಿ (ಬೆಂಗಳೂರು ಉತ್ತರ), ಕೆ.ಗೊಲ್ಲಹಳ್ಳಿ (ಬೆಂಗಳೂರು ದಕ್ಷಿಣ) ಹಾಲನಾಯಕನಹಳ್ಳಿ (ಬೆಂಗಳೂರು ಪೂರ್ವ) ಗ್ರಾಮ ಪಂಚಾಯತಿಗಳು ಆಯ್ಕೆಯಾಗಿರುತ್ತವೆ.

**ಬೆಂಗಳೂರು (ಗ್ರಾಮಾಂತರ) ಜಿಲ್ಲೆಯಲ್ಲಿ** ಕೋರಮಂಗಲ (ದೇವನಹಳ್ಳಿ), ಕನಸವಾಡಿ (ದೊಡ್ಡಬಳ್ಳಾಪುರ), ನೆಲವಾಗಿಲು (ಹೊಸಕೋಟೆ), ಕಳಲುಘಟ್ಟ (ನೆಲಮಂಗಲ) ಗ್ರಾಮ ಪಂಚಾಯತಿಗಳು ಆಯ್ಕೆಯಾಗಿರುತ್ತವೆ.

**ರಾಮನಗರ ಜಿಲ್ಲೆಯಲ್ಲಿ** ದೊಡ್ಡಮರಳವಾಡಿ (ಕನಕಪುರ), ಸೋಲೂರು (ಮಾಗಡಿ), ಹಾರೋಕೊಪ್ಪ (ಚನ್ನಪಟ್ಟಣ), ಹರೀಸಂದ್ರ (ರಾಮನಗರ) ಗ್ರಾಮ ಪಂಚಾಯತಿಗಳು ಆಯ್ಕೆಯಾಗಿರುತ್ತವೆ.

**ಬೆಳಗಾವಿ ಜಿಲ್ಲೆಯಲ್ಲಿ** ಶಿರಗುಪ್ಪಿ (ಅಥಣಿ), ಹಣಬರಟ್ಟಿ (ಬೈಲಹೊಂಗಲ), ಬೆಣಕನಹಳ್ಳಿ (ಬೆಳಗಾವಿ), ಜಾಗನೂರ (ಚಿಕ್ಕೋಡಿ), ಕೌಜಲಗಿ (ಗೋಕಾಕ), ಬೆಣ್ಣಿವಾಡ (ಹುಕ್ಕೇರಿ), ಕರಂಬಾಳ (ಖಾನಾಪುರ) ನಂದಿಕುರಳಿ (ರಾಯಭಾಗ), ಸುನ್ನಾಳ (ರಾಮದುರ್ಗ), ಸಂಗ್ರೇಶಕೊಪ್ಪ (ಸವದತ್ತಿ) ಗ್ರಾಮ ಪಂಚಾಯತಿಗಳು ಆಯ್ಕೆಯಾಗಿರುತ್ತವೆ.

**ಬಳ್ಳಾರಿ ಜಿಲ್ಲೆಯಲ್ಲಿ** ಸೋಮಸಮುದ್ರ (ಬಳ್ಳಾರಿ), ಕುರುವತ್ತಿ (ಹಡಗಲಿ), ಹಲಗಾಪುರ (ಹಗರಿಬೊಮ್ಮನಹಳ್ಳಿ), ಕಲ್ಲಹಳ್ಳಿ (ಹೊಸಪೇಟೆ), ಗುಡೇಕೋಟೆ (ಕೂಡ್ಲಿಗಿ), ದರೋಜಿ (ಸಂಡೂರು), ಹಳೇಕೋಟೆ (ಸಿರುಗುಪ್ಪ) ಗ್ರಾಮ ಪಂಚಾಯತಿಗಳು ಆಯ್ಕೆಯಾಗಿರುತ್ತವೆ.

**ಬೀದರ ಜಿಲ್ಲೆಯಲ್ಲಿ** ಸಂತಪೂರ(ಔರಾದ), ಯರಂಡಿ(ಬಸವಕಲ್ಯಾಣ), ತೆಲಗಾಂವ(ಭಾಲ್ಕಿ), ನಾಗೂರಾ(ಬೀದರ), ಬೇನಚಿಂಚೋಳಿ(ಹುಮನಾಬಾದ) ಗ್ರಾಮ ಪಂಚಾಯತಿಗಳು ಆಯ್ಕೆಯಾಗಿರುತ್ತವೆ.

**ವಿಜಯಪುರ ಜಿಲ್ಲೆಯಲ್ಲಿ** ಚಿಮ್ಮಲಗಿ(ಬಸವನ ಬಾಗೇವಾಡಿ), ಕನಮಡಿ(ವಿಜಯಪುರ), ಬರಡೋಲ(ಇಂಡಿ), ರೂಢಗಿ(ಮುದ್ದೇಬಿಹಾಳ), ಗಬಸಾವಳಗಿ(ಸಿಂಧಗಿ) ಗ್ರಾಮ ಪಂಚಾಯತಿಗಳು ಆಯ್ಕೆಯಾಗಿರುತ್ತವೆ.

**ಚಾಮರಾಜನಗರ ಜಿಲ್ಲೆಯಲ್ಲಿ** ಯರಗನಹಳ್ಳಿ(ಚಾಮರಾಜನಗರ), ನೇನೇಕಟ್ಟೆ(ಗುಂಡ್ಲುಪೇಟೆ), ಹುತ್ತೂರು(ಕೊಳ್ಳೇಗಾಲ), ಗುಂಬಳ್ಳಿ(ಯಳಂದೂರು) ಗ್ರಾಮ ಪಂಚಾಯತಿಗಳು ಆಯ್ಕೆಯಾಗಿರುತ್ತದೆ.

**ಚಿಕ್ಕಮಗಳೂರು ಜಿಲ್ಲೆಯಲ್ಲಿ** ಮೂಕ್ತಿಹಳ್ಳಿ(ಚಿಕ್ಕಮಗಳೂರು), ತಿಮ್ಲಾಪುರ(ಕಡೂರು), ಶಾನುವಳ್ಳಿ(ಕೊಪ್ಪ), ಸುಂಕಸಾಲೆ(ಮೂಡಿಗೆರೆ), ಮಾಗುಂಡಿ(ನರಸಿಂಹರಾಜಪುರ), ವಿದ್ಯಾರಣ್ಯಪುರ(ಶೃಂಗೇರಿ), ನೇರಲಕೆರೆ(ತರೀಕೆರೆ) ಗ್ರಾಮ ಪಂಚಾಯತಿಗಳು ಆಯ್ಕೆಯಾಗಿರುತ್ತವೆ.

**ಚಿತ್ರದುರ್ಗ ಜಿಲ್ಲೆಯಲ್ಲಿ** ಅಬ್ಬೇನಹಳ್ಳಿ(ಚಳ್ಳಕೆರೆ), ಮೆದೇಹಳ್ಳಿ(ಚಿತ್ರದುರ್ಗ), ಇಕ್ಕನೂರು(ಹಿರಿಯೂರು), ಚಿಕ್ಕ ಎಮ್ಮಿಗನೂರು(ಹೊಳಲ್ಕೆರೆ), ಕೈನಡು(ಹೊಸದುರ್ಗ), ದೇವಸಮುದ್ರ(ಮೊಳಕಾಲ್ಮೂರು) ಗ್ರಾಮ ಪಂಚಾಯತಿಗಳು ಆಯ್ಕೆಯಾಗಿರುತ್ತವೆ.

**ದಕ್ಷಿಣ ಕನ್ನಡ ಜಿಲ್ಲೆಯಲ್ಲಿ** ಮುಂಡಾಜೆ(ಬೆಳ್ತಂಗಡಿ), ಕಾವಳಪಡೂರು(ಬಂಟ್ವಾಳ), ದರೆಗುಡ್ಡೆ(ಮಂಗಳೂರು), ಬೆಟ್ಟಂಪಾಡಿ(ಪುತ್ತೂರು), ಕನಕಮಜಲು(ಸುಳ್ಯ) ಗ್ರಾಮ ಪಂಚಾಯತಿಗಳು ಆಯ್ಕೆಯಾಗಿರುತ್ತವೆ.

**ದಾವಣಗೆರೆ ಜಿಲ್ಲೆಯಲ್ಲಿ** ಸಂತೇಬೆನ್ನೂರು(ಚನ್ನಗಿರಿ), ಕಡ್ಲೇಬಾಳು(ದಾವಣಗೆರೆ), ಗುತ್ತೂರು(ಹರಿಹರ), ಅಣಜಿಗೆರೆ(ಹರಪನಹಳ್ಳಿ), ಚೀಲೂರು(ಹೊನ್ನಾಳಿ), ಹಾಲೇಕಲ್ಲು(ಜಗಳೂರು) ಗ್ರಾಮ ಪಂಚಾಯತಿಗಳು ಆಯ್ಕೆಯಾಗಿರುತ್ತವೆ.

**ಧಾರವಾಡ ಜಿಲ್ಲೆಯಲ್ಲಿ** ಹೆಬ್ಬಳ್ಳಿ(ಧಾರವಾಡ), ಅದರಗಂಚಿ(ಹುಬ್ಬಳ್ಳಿ), ಸೂಳಿಕಟ್ಟಿ(ಕಲಘಟಗಿ), ಗುಡಗೇರಿ(ಕುಂದಗೋಳ), ಶಿರೂರ(ನವಲಗುಂದ) ಗ್ರಾಮ ಪಂಚಾಯತಿಗಳು ಆಯ್ಕೆಯಾಗಿರುತ್ತವೆ.

**ಗದಗ ಜಿಲ್ಲೆಯಲ್ಲಿ** ಕುರ್ತಕೋಟಿ(ಗದಗ), ಹಳ್ಳಿಕೇರಿ(ಮುಂಡರಗಿ), ಹುಣಶಿಕಟ್ಟಿ(ನರಗುಂದ), ರಾಜೂರು (ರೋಣ), ಮಾಗಡಿ (ಶಿರಹಟ್ಟಿ) ಗ್ರಾಮ ಪಂಚಾಯತಿಗಳು ಆಯ್ಕೆಯಾಗಿರುತ್ತವೆ.

**ಕಲಬುರಗಿ ಜಿಲ್ಲೆಯಲ್ಲಿ** ದೇವಲಗಾಣಗಾಪುರ (ಅಫ್ಜಲ್‌ಪುರ), ಕಿಣ್ಣಿಸುಲ್ತಾನ (ಆಳಂದ), ದೇಗಲಮಡಿ (ಚಿಂಚೋಳಿ), ಮಾಡಬೂಳ (ಚಿತ್ತಾಪುರ), ಓಕಳಿ (ಕಲಬುರಗಿ), ಹಿಪ್ಪರಗಾ ಎಸ್‌ಎನ್ (ಜೇವರ್ಗಿ), ನೀಲಹಳ್ಳಿ (ಸೇಡಂ), ಗ್ರಾಮ ಪಂಚಾಯತಿಗಳು ಆಯ್ಕೆಯಾಗಿರುತ್ತವೆ.

**ಯಾದಗಿರಿ ಜಿಲ್ಲೆಯಲ್ಲಿ** ಹಯ್ಯಾಳ ಬಿ (ಶಹಾಪುರ), ಹುಣಸಗಿ (ಸುರಪುರ), ಕಡೇಚೂರು (ಯಾದಗಿರಿ) ಗ್ರಾಮ ಪಂಚಾಯತಿಗಳು ಆಯ್ಕೆಯಾಗಿರುತ್ತವೆ.

**ಹಾಸನ ಜಿಲ್ಲೆಯಲ್ಲಿ** ಮಗ್ಗೆ (ಆಲೂರು), ಡಿ ಎಂ ಕುರ್ಕೆ (ಅರಸೀಕೆರೆ), ಬನ್ನೂರು (ಅರಕಲಗೂಡು), ಹಳೇಬೀಡು (ಬೇಲೂರು), ಹಿರೀಸಾವೆ (ಚನ್ನರಾಯಪಟ್ಟಣ), ದುದ್ದ (ಹಾಸನ), ಹರಿಹರಪುರ (ಹೊಳೆನರಸೀಪುರ), ಬಾಗೆ (ಸಕಲೇಶಪುರ) ಗ್ರಾಮ ಪಂಚಾಯತಿಗಳು ಆಯ್ಕೆಯಾಗಿರುತ್ತವೆ.

**ಹಾವೇರಿ ಜಿಲ್ಲೆಯಲ್ಲಿ** ಮಲ್ಲೂರು (ಬ್ಯಾಡಗಿ), ಕಲ್ಲಾಪುರ (ಹಾನಗಲ್), ಅಗಡಿ (ಹಾವೇರಿ), ನಾಗವಂದ (ಹಿರೇಕೆರೂರು), ಅಂತರವಳ್ಳಿ (ರಾಣೆಬೆನ್ನೂರು), ತೆಗ್ಗಿಹಳ್ಳಿ (ಸವಣೂರು), ಕುನ್ನೂರು (ಶಿಗ್ಗಾಂವ) ಗ್ರಾಮ ಪಂಚಾಯತಿಗಳು ಆಯ್ಕೆಯಾಗಿರುತ್ತವೆ.

**ಕೊಡಗು ಜಿಲ್ಲೆಯಲ್ಲಿ** ಮಕ್ಕಂದೂರು(ಮಡಿಕೇರಿ), ತೊರೆನೂರು(ಸೋಮವಾರಪೇಟೆ), ಪಾಲಿಬೆಟ್ಟ (ವಿರಾಜಪೇಟೆ) ಗ್ರಾಮ ಪಂಚಾಯತಿಗಳು ಆಯ್ಕೆಯಾಗಿರುತ್ತವೆ.

**ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ** ಯಲ್ಲಂಪಲ್ಲಿ(ಬಾಗೇಪಲ್ಲಿ), ಮುನಗನಹಳ್ಳಿ(ಚಿಂತಾಮಣಿ), ಅಲಕಾಪುರ (ಗೌರಿಬಿದನೂರು), ಮುದ್ದೇನಹಳ್ಳಿ(ಚಿಕ್ಕಬಳ್ಳಾಪುರ), ಚೀಮಂಗಲ( ಶಿಡ್ಲಘಟ್ಟ), ಹಂಪಸಂದ್ರ(ಗುಡಿಬಂಡೆ) ಗ್ರಾಮ ಪಂಚಾಯತಿಗಳು ಆಯ್ಕೆಯಾಗಿರುತ್ತವೆ.

**ಕೋಲಾರ ಜಿಲ್ಲೆಯಲ್ಲಿ** ಬೇತಮಂಗಲ(ಬಂಗಾರಪೇಟೆ), ಅರಾಭಿಕೊತ್ತನುರು(ಕೋಲಾರ), ನೂಟವೇ (ಮಾಲೂರು), ಬೈರಕೂರು(ಮುಳಬಾಗಿಲು), ಜೆ.ತಿಮ್ಮಸಂದ್ರ(ಶ್ರೀನಿವಾಸಪುರ) ಗ್ರಾಮ ಪಂಚಾಯತಿಗಳು ಆಯ್ಕೆಯಾಗಿರುತ್ತವೆ.

**ಕೊಪ್ಪಳ ಜಿಲ್ಲೆಯಲ್ಲಿ** ಆನೆಗುಂದಿ(ಗಂಗಾವತಿ), ಭಾಗ್ಯನಗರ(ಕೊಪ್ಪಳ), ತಾರಗೇರಾ(ಕುಷ್ಟಗಿ), ಗುನ್ನಾಳ (ಯಲಬುರ್ಗಾ) ಗ್ರಾಮ ಪಂಚಾಯತಿಗಳು ಆಯ್ಕೆಯಾಗಿರುತ್ತವೆ.

**ಮಂಡ್ಯ ಜಿಲ್ಲೆಯಲ್ಲಿ** ಅಗ್ರಹಾರಬಾಚಹಳ್ಳಿ(ಕೃಷ್ಣರಾಜಪೇಟೆ), ಯಡಗನಹಳ್ಳಿ(ಮದ್ದೂರು), ರಾಗಿಬೊಮ್ಮನಹಳ್ಳಿ (ಮಳವಳ್ಳಿ), ಕೆರಗೋಡು(ಮಂಡ್ಯ), ಬೆಳ್ಳೂರು(ನಾಗಮಂಗಲ), ಕಟ್ಟೇರಿ(ಪಾಂಡವಪುರ), ಬೆಳಗೊಳ (ಶ್ರೀರಂಗಪಟ್ಟಣ) ಗ್ರಾಮ ಪಂಚಾಯತಿಗಳು ಆಯ್ಕೆಯಾಗಿರುತ್ತವೆ.

**ಮೈಸೂರು ಜಿಲ್ಲೆಯಲ್ಲಿ** ಕಲ್ಲಂಬಾಳು(ಹೆಗ್ಗಡದೇವನಕೋಟೆ), ತಟ್ಟೆಕೆರೆ(ಹುಣಸೂರು), ಗಂಧನಹಳ್ಳಿ (ಕೃಷ್ಣರಾಜನಗರ), ಶ್ರೀರಾಂಪುರ(ಮೈಸೂರು), ಮಲ್ಲೂಪುರ(ನಂಜನಗೂಡು), ಬೆಟ್ಟದಪುರ (ಪಿರಿಯಾಪಟ್ಟಣ), ಹೊಳೆಸಾಲು(ಟಿ. ನರಸೀಪುರ) ಗ್ರಾಮ ಪಂಚಾಯತಿಗಳು ಆಯ್ಕೆಯಾಗಿರುತ್ತವೆ.

**ರಾಯಚೂರು ಜಿಲ್ಲೆಯಲ್ಲಿ** ಗಲಗ(ದೇವದುರ್ಗ), ಅಂಕುಶದೊಡ್ಡಿ,(ಲಿಂಗಸುಗೂರು), ಪಾಮನಕಲ್ಲೂರ (ಮಾನ್ವಿ), ಯದ್ಲಾಪೂರು(ರಾಯಚೂರು), ಅಲಬನೂರು(ಸಿಂಧನೂರು) ಗ್ರಾಮ ಪಂಚಾಯತಿಗಳು ಆಯ್ಕೆಯಾಗಿರುತ್ತವೆ.

**ಶಿವಮೊಗ್ಗ ಜಿಲ್ಲೆಯಲ್ಲಿ** ಆನವೇರಿ(ಭಧ್ರಾವತಿ), ಅರಮನೆಕೊಪ್ಪ(ಹೊಸನಗರ), ಕೋಳೂರು(ಸಾಗರ), ಮಂಚಿಕೊಪ್ಪ(ಶಿಕಾರಿಪುರ), ಬಿದರೆ(ಶಿವಮೊಗ್ಗ), ಮೂಡಿದೊಡ್ಡಿಕೊಪ್ಪ(ಸೊರಬ), ನೆರಟೂರು(ತೀರ್ಥಹಳ್ಳಿ) ಗ್ರಾಮ ಪಂಚಾಯತಿಗಳು ಆಯ್ಕೆಯಾಗಿರುತ್ತವೆ.

**ತುಮಕೂರು ಜಿಲ್ಲೆಯಲ್ಲಿ** ಗಾಣದಾಳು(ಚಿಕ್ಕನಾಯಕನಹಳ್ಳಿ), ನಲ್ಲೂರು(ಗುಬ್ಬಿ), ತೀತಾ(ಕೊರಟಗೆರೆ), ಬೇಗೂರು(ಕುಣಿಗಲ್), ಮಿಡಿಗೇಶಿ(ಮಧುಗಿರಿ), ಬ್ಯಾಡನೂರು(ಪಾವಗಡ), ಹೆಂದೊರೆ(ಶಿರಾ), ಮಣಕಿಕೆರೆ(ತಿಪಟೂರು), ಊರುಕೆರೆ(ತುಮಕೂರು), ಬೈತರ ಹೊಸಹಳ್ಳಿ(ತುರುವೇಕೆರೆ) ಗ್ರಾಮ ಪಂಚಾಯತಿಗಳು ಆಯ್ಕೆಯಾಗಿರುತ್ತವೆ.

**ಉಡುಪಿ ಜಿಲ್ಲೆಯಲ್ಲಿ** ವರಂಗ(ಕಾರ್ಕಳ), ಹೆಂಗವಳ್ಳಿ(ಕುಂದಾಪುರ), ಕೋಟತಟ್ಟು(ಉಡುಪಿ) ಗ್ರಾಮ ಪಂಚಾಯತಿಗಳು ಆಯ್ಕೆಯಾಗಿರುತ್ತವೆ.

**ಉತ್ತರ ಕನ್ನಡ ಜಿಲ್ಲೆಯಲ್ಲಿ** ಬೆಳಸೆ(ಅಂಕೋಲ), ಬೆಂಗ್ರೆ(ಭಟ್ಕಳ), ತೆರಗಾಂವ(ಹಳಿಯಾಳ), ಹೆರಂಗಡಿ(ಹೊನ್ನಾವರ), ಗೂಟೇಗಾಳಿ(ಕಾರವಾರ), ಬರ್ಗಿ(ಕುಮಟ), ಚಿಗಳ್ಳಿ(ಮುಂಡಗೋಡ), ಬಿದ್ರಖಾನ(ಸಿದ್ದಾಪುರ), ಇಟಗುಳಿ(ಶಿರಸಿ), ನಾಗೋಡಾ(ಜೋಯಿಡ), ದೇಹಳ್ಳಿ(ಯಲ್ಲಾಪುರ) ಗ್ರಾಮ ಪಂಚಾಯತಿಗಳು ಆಯ್ಕೆಯಾಗಿರುತ್ತವೆ.

ಒಕಂಬಿ

# ಕಬ್ಬನ್‌ಪಾರ್ಕ್‌ನಲ್ಲಿ ಈ ಭಾನುವಾರ

**ಬೆಂಗಳೂರು, ಅಕ್ಟೋಬರ್ 1 (ಕರ್ನಾಟಕ ವಾರ್ತೆ)**

ಶ್ರೀ ಚಾಮರಾಜೇಂದ್ರ ಉದ್ಯಾನವನ (ಕಬ್ಬನ್ ಪಾರ್ಕ್) ಒಳರಸ್ತೆಗಳಲ್ಲಿ ಭಾನುವಾರದ ದಿನಗಳಂದು ಸಾರ್ವಜನಿಕ ವಾಹನ ಸಂಚಾರವನ್ನು ನಿಷೇಧಿಸಲಾಗಿದ್ದು, ಉದ್ಯಾನವನದ ಆವರಣದಲ್ಲಿ ಸಾರ್ವಜನಿಕರು, ಪ್ರವಾಸಿಗರು ಮತ್ತು ನಡಿಗೆದಾರರ ಅನುಕೂಲಕ್ಕಾಗಿ ಪ್ರತಿ ಭಾನುವಾರದ ದಿನಗಳಂದು ವಿವಿಧ ಕಾರ್ಯ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗುತ್ತಿರುತ್ತದೆ. ದಿನಾಂಕ:04–10–2015ರ ಭಾನುವಾರದಂದು ಶ್ರೀ ಚಾಮರಾಜೇಂದ್ರ ಉದ್ಯಾನವನದ (ಕಬ್ಬನ್ ಉದ್ಯಾನವನ) ಬ್ಯಾಂಡ್ ಸ್ಟ್ಯಾಂಡ್ ಆವರಣ ಹಾಗೂ ಮುಂಭಾಗದ ರಸ್ತೆಯಲ್ಲಿ ಮತ್ತು ಶ್ರೀ ಚಾಮರಾಜೇಂದ್ರ ಒಡೆಯರ್ ಪ್ರತಿಮೆಯ ಸುತ್ತಮುತ್ತಲಿನ ಪ್ರದೇಶದಲ್ಲಿ ಈ ಕೆಳಕಂಡ ಕಾರ್ಯಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗಿರುತ್ತದೆ. ಸಾರ್ವಜನಿಕರು, ಪ್ರವಾಸಿಗರು ಮತ್ತು ನಡಿಗೆದಾರರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ, ಸದರಿ ಕಾರ್ಯಚಟುವಟಿಕೆಗಳ ಸದುಪಯೋಗವನ್ನು ಪಡೆದುಕೊಳ್ಳುವಂತೆ ಈ ಮೂಲಕ ಕೋರಲಾಗಿದೆ.

1. ಬೆಳಿಗ್ಗೆ 06.00 ಗಂಟೆಯಿಂದ ಬೆಳಿಗ್ಗೆ 07.00 ಗಂಟೆಯವರೆಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದೊಂದಿಗೆ ಬ್ಯಾಂಡ್ ಸ್ಟ್ಯಾಂಡ್ ಆವರಣದಲ್ಲಿ "**ಉದ್ಯಾನವನದಲ್ಲಿ ಉದಯರಾಗ**" ಎಂಬ ಶೀರ್ಷಿಕೆಯಡಿ ಶ್ರೀ ಯಾದವೇಂದ್ರ ಪೂಜಾರಿ ಮತ್ತು ಸಂಗಡಿಗರಿಂದ (ಬೆಳಗಾವಿ) ಸುಗಮ ಸಂಗೀತ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿದೆ.
2. ಸಂಜೆ 05.00 ಗಂಟೆಯಿಂದ ಸಂಜೆ 06.00 ಗಂಟೆಯವರೆಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದೊಂದಿಗೆ ಬ್ಯಾಂಡ್ ಸ್ಟ್ಯಾಂಡ್ ಆವರಣದಲ್ಲಿ "**ಉದ್ಯಾನವನದಲ್ಲಿ ಸಂಧ್ಯಾರಾಗ**" ಎಂಬ ಶೀರ್ಷಿಕೆಯಡಿ ಶ್ರೀ ಜೆ. ಮೂರ್ತಿ ಮುಡಿಗೊಂಡ ಮತ್ತು ಸಂಗಡಿಗರಿಂದ (ಕೊಳ್ಳೇಗಾಲ) ಸುಗಮಸಂಗೀತ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.
3. ಬೆಳಿಗ್ಗೆ 6.00 ಗಂಟೆಯಿಂದ ಸಂಜೆ 6.00 ಗಂಟೆಯವರೆಗೆ ಉದ್ಯಾನವನದಲ್ಲಿರುವ ಒಳರಸ್ತೆಗಳಲ್ಲಿ ನಗರ ಭೂಸಾರಿಗೆ ನಿರ್ದೇಶನಾಲಯರವರ ಸಹಯೋಗದೊಂದಿಗೆ ಬಾಡಿಗೆ ರಹಿತ ಸೈಕಲ್ ಸವಾರಿ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.
4. ಉದ್ಯಾನವನದ ಆವರಣದಲ್ಲಿ ಜೈವಿಕ್ ಕೃಷಿಕ್ ಸೊಸೈಟಿ(ರಿ), ಲಾಲ್‌ಬಾಗ್, ಬೆಂಗಳೂರುರವರು ತಮ್ಮ ಮಾರಾಟ ಮಳಿಗೆಯಲ್ಲಿ ಸಾವಯವ ಪದ್ಧತಿಯಲ್ಲಿ ಬೆಳೆದ ವಿವಿಧ ರೀತಿಯ ಹಣ್ಣುಗಳು ಮತ್ತು ಹಣ್ಣಿನ ಜ್ಯೂಸ್ ಮತ್ತು ಇತರೆ ಸಾವಯವ ಆಹಾರ ಪದಾರ್ಥಗಳ ಮಾರಾಟವನ್ನು ಕೈಗೊಳ್ಳುತ್ತಾರೆ.
5. ಉದ್ಯಾನವನದ ಆವರಣದಲ್ಲಿ ಹಾಪ್‌ಕಾಮ್ಸ್, ಬೆಂಗಳೂರುರವರು ವಿವಿಧ Cut Fruits, Dry Fruits ಮತ್ತು ವಿವಿಧ ತಾಜಾ ಹಣ್ಣುಗಳು, ಪ್ಯಾಕ್ ಮಾಡಿದ ತಾಜಾ ತರಕಾರಿಗಳು ಹಾಗೂ ಹಣ್ಣಿನ ಜ್ಯೂಸ್‌ಗಳ ಮಾರಾಟವನ್ನು ಕೈಗೊಳ್ಳುತ್ತಾರೆ.
6. ಉದ್ಯಾನವನದ ಆವರಣದಲ್ಲಿ ದಿ ನರ್ಸರಿಮೆನ್ ಕೋ–ಆಪರೇಟೀವ್ ಸೊಸೈಟಿ, ಲಾಲ್‌ಬಾಗ್, ಬೆಂಗಳೂರುರವರು ವಿವಿಧ ಅಲಂಕಾರಿಕ ಗಿಡಗಳು ಮತ್ತು ಉದ್ಯಾನವನ ಸಲಕರಣೆಗಳ ಮಾರಾಟವನ್ನು ಕೈಗೊಳ್ಳುತ್ತಾರೆ.

7. ಸಾರ್ವಜನಿಕ ಗ್ರಂಥಾಲಯ ಇಲಾಖೆ, ಬೆಂಗಳೂರುರವರ ವತಿಯಿಂದ ನಗರ ಕೇಂದ್ರ ಗ್ರಂಥಾಲಯ ಮತ್ತು ಇಂದಿರಾ ಪ್ರಿಯದರ್ಶಿನಿ ಮಕ್ಕಳ ಗ್ರಂಥಾಲಯದ ಆವರಣದಲ್ಲಿ ಪುಸ್ತಕ ಪ್ರದರ್ಶನವನ್ನು ಏರ್ಪಡಿಸಲಾಗಿದೆ.
8. ಕಬ್ಬನ್ ಉದ್ಯಾನವನದ ಒಳರಸ್ತೆಗಳಲ್ಲಿ ಸಾರ್ವಜನಿಕರು, ಪ್ರವಾಸಿಗರು ಮತ್ತು ವಯೋವೃದ್ಧರ ಅನುಕೂಲಕ್ಕಾಗಿ ಎರಡು ಸಂಖ್ಯೆಯ **ಪರಿಸರ ಸ್ನೇಹಿ ವಿದ್ಯುತ್‌ಚಾಲಿತ ವಾಹನಗಳ** ಸೇವೆಯನ್ನು ನಿಗಧಿತ ಶುಲ್ಕ ನೀಡಿ ಸಾರ್ವಜನಿಕರು ಪಡೆಯಬಹುದು.

## ಈ ಭಾನುವಾರದ ವಿಶೇಷ ಕಾರ್ಯಕ್ರಮಗಳು:

### I. ಸ್ಥಳ: ಬ್ಯಾಂಡ್ ಸ್ಟ್ಯಾಂಡ್ ಆವರಣ

- ಬೆಳಿಗ್ಗೆ 7.00 ಗಂಟೆಯಿಂದ ಬೆಳಿಗ್ಗೆ 8.00 ಗಂಟೆಯವರೆಗೆ ಯೂನಿವರ್ಸ್ ಆರ್ಟ್ ಫೌಂಡೇಶನ್ ಸಹಯೋಗದೊಂದಿಗೆ ಶ್ರೀಮತಿ ಎನ್ ಮಗಂಧಿ, ಎನ್.ಶ್ರೀ ಗಾಯತ್ರಿ, ಎಸ್.ಸಾಧನ ಮತ್ತು ಟಿ.ಎಸ್. ಸುಬ್ಬಲಕ್ಷ್ಮಿ, ಹೊಸೂರುರವರಿಂದ ಕರ್ನಾಟಕ್ ಶಾಸ್ತ್ರೀಯ ಸಂಗೀತ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.
- ಬೆಳಿಗ್ಗೆ 8.00 ಗಂಟೆಯಿಂದ ಬೆಳಿಗ್ಗೆ 9.00 ಗಂಟೆಯವರೆಗೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ವತಿಯಿಂದ ಬಾಲಭವನ ಸೊಸೈಟಿ, ಬೆಂಗಳೂರುರವರ ಸಹಯೋಗದೊಂದಿಗೆ ಕಲಾವರ್ಧಿನಿ ಸಂಸ್ಥೆರವರ ವತಿಯಿಂದ ದೇವರನಾಮ ಹಾಗೂ ವಾದ್ಯ ಸಂಗೀತ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.
- ಸಂಜೆ 4.00 ಗಂಟೆಯಿಂದ 5.00 ಗಂಟೆಯವರೆಗೆ ಕನ್ನಡ ಅಭಿವೃದ್ಧಿ ಪ್ರಾಧಿಕಾರ ಮತ್ತು ಅಕ್ಷಯ ಪೌಂಢೇಷನ್ ರವರ ಸಹಯೋಗದೊಂದಿಗೆ ಪ್ರೊ. ಆರ್. ವಸುಂಧರ, ಕನ್ನಡ ಉಪನ್ಯಾಸಕರು, ಸರ್ಕಾರಿ ಪ್ರಥಮದರ್ಜೆ ಕಾಲೇಜು, ಹೆಚ್.ಎಸ್.ಆರ್. ಲೇಔಟ್, ಬೆಂಗಳೂರು ಇವರಿಂದ "ಕನ್ನಡ ಸಾಹಿತ್ಯಕ್ಕೆ ಕೊಡಗಿನ ಗೌರಮ್ಮನ ಕೊಡುಗೆ" ಬಗ್ಗೆ ಉಪನ್ಯಾಸ ಕಾರ್ಯಕ್ರಮವನ್ನು ಮತ್ತು ಕೂಚುಪುಡಿ ನೃತ್ಯ ಪ್ರದರ್ಶನ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.

### II. ಸ್ಥಳ: ಶ್ರೀ ಚಾಮರಾಜೇಂದ್ರ ಒಡೆಯರ್ ಪ್ರತಿಮೆಯ ಹತ್ತಿರ

- ಬೆಳಿಗ್ಗೆ 7.00 ಗಂಟೆಯಿಂದ ಬೆಳಿಗ್ಗೆ 11.00 ಗಂಟೆಯವರೆಗೆ ಐಶ್ವರ್ಯ ಟ್ರಸ್ಟ್, ಟಿ. ನಗರ, ಚೆನ್ನೈರವರಿಂದ ನವಜಾತ ಶಿಶುಗಳಿಗೆ ಬರುವಂತಹ ಜನ್ಮಜಾತ ಹೃದಯ ದೋಷಗಳ (**Congenital Heart Defects**) ಬಗ್ಗೆ ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.
- ಬೆಂಗಳೂರಿನ ವಿವಿಧ ಪ್ರದೇಶಗಳ ಮಾಹಿತಿಯ ಬಗ್ಗೆ ಶ್ರೀ ಶಿವಶಂಕರ್‌ರವರು ಬರೆದಿರುವ "ಬೆಂಗಳೂರು ಚುರುಮುರಿ" ಎಂಬ ಪುಸ್ತಕಗಳ ಪ್ರದರ್ಶನ ಹಾಗೂ ಮಾರಾಟವನ್ನು ಹಮ್ಮಿಕೊಳ್ಳಲಾಗಿದೆ.
- ಬೆಳಿಗ್ಗೆ 6.00 ಗಂಟೆಯಿಂದ ಬೆಳಿಗ್ಗೆ 10.00 ಗಂಟೆಯವರೆಗೆ ಘನತ್ಯಾಜ್ಯ ನಿರ್ವಹಣೆ ಮತ್ತು ಅಡುಗೆ ಮನೆಯಲ್ಲಿನ ತ್ಯಾಜ್ಯ (**Kitchen Waste**) ಉಪಯೋಗಿಸಿ ಗೊಬ್ಬರ ಉತ್ಪತ್ತಿ ಮಾಡುವುದು ಹಾಗೂ ಕಸದಿಂದ ಬಯೋಗ್ಯಾಸ್ ಉತ್ಪಾದನೆಯ ಬಗ್ಗೆ ಶ್ರೀ ಎನ್.ಎಸ್.ರಮಾಕಾಂತ್, **Co-Founder, Solid Waste Management Round Table, Bengaluru** ರವರಿಂದ ಪ್ರಾತ್ಯಾಕ್ಷಿಕೆ ಮೂಲಕ ತಿಳುವಳಿಕೆ ನೀಡಲಾಗುವುದು.
- ಬೆಳಿಗ್ಗೆ 6.00 ಗಂಟೆಯಿಂದ ಮಧ್ಯಾಹ್ನ 11.00 ಗಂಟೆಯವರೆಗೆ ಸಹಾಯ ಹೋಲಿಸ್ಟಿಕ್ ಇಂಟೆಗ್ರೇಟೀವ್ ಹಾಸ್ಪಿಟಲ್ ಪ್ರೈವೇಟ್ ಲಿಮಿಟೆಡ್, ಜಯನಗರ, ಬೆಂಗಳೂರುರವರ ವತಿಯಿಂದ ಆಯುರ್ವೇದ, ನ್ಯಾಚುರೋಪತಿ, ಹೋಮಿಯೋಪತಿ

ಮತ್ತು ಯೋಗ ವಿಧಾನಗಳಿಂದ ಉತ್ತಮ ಆರೋಗ್ಯ ಕಾಪಾಡಿಕೊಳ್ಳುವ ಮಾಹಿತಿ ಮತ್ತು ಜಾಗೃತಿ ಕಾರ್ಯಕ್ರಮ ಹಾಗೂ ಆರೋಗ್ಯದ ತಪಾಸಣೆ, ಸಲಹೆಗಳು ಮತ್ತು ಗಿಡಮೂಲಿಕೆಗಳ ಸಿದ್ಧ ಔಷಧದ ಬಗ್ಗೆ ಮಾಹಿತಿ ನೀಡಲಾಗುವುದು.